ಆದರೆ ಭಾರತದ ಶ್ರೇಷ್ಟ ನ್ಯಾಯಾಲಯ ಹಾಗೂ ಕರ್ನಾಟಕ ಉಚ್ಚ ನ್ಯಾಯಾಲಯವು ನೀಡಿದ ತೀರ್ಪಿನಂತೆ ಕುಮ್ಕಿ ಹಕ್ಕನ್ನು ರದ್ದುಗೊಳಿಸಲು ಅವಕಾಶವಿಲ್ಲ ಆದರೆ ಸಾರ್ವಜನಿಕ ಉದ್ದೇಶಕ್ಕೆ ಕುಮ್ಕಿ ಜಮೀನುಗಳು ಬೇಕಾದಾಗ ಸರಕಾರದ ಅಧಿಸೂಚನೆ ಸಂ:ಆರ್‌ಡಿ 28 ಎಲ್‌ಎಡಬ್ಲ್ಯೂ 71, ದಿನಾಂಕ: 29.11.71 ರಂತೆ ಅಂತಹ ಜಮೀನುಗಳ ಕುಮ್ಕಿ ಹಕ್ಕನ್ನು ರದ್ದು ಪಡಿಸಿ ಸಾರ್ವಜನಿಕ ಉಪಯೋಗಕ್ಕೆ ಬಳಸಲು ಅವಕಾಶ ಕಲ್ಪಿಸಲಾಗಿದೆ.

739(983) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ(ಕುಂದಾಪುರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅಕ್ರಮ-ಜಮೀನು ಸಕ್ರಮೀಕರಣಗೊಳಿಸುವ ಬಗ್ಗೆ ಅರ್ಜಿ ಸಲ್ಲಿಸಲು ಮಾಹಿತಿಯ ಕೊರತೆಯಿಂದ ಬಹಳಷ್ಟು ಗ್ರಾಮಸ್ಥರು ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ಬಂದಿದ್ದಲ್ಲಿ, ಅರ್ಜಿ ಸಲ್ಲಿಸಲು ಪುನಃ ಕಾಲವಕಾಶ ಒದಗಿಸಲಾಗುವುದೇ:

ಇ) ಅವಕಾಶ ನೀಡುವುದಾದಲ್ಲಿ ಯಾವ ದಿನಾಂಕದಿಂದ ಎಲ್ಲಯವರೆಗೆ ಅವಕಾಶ ನೀಡಲಾಗುವುದು?

ಶ್ರೀ ಎಂ.ಪಿ. ಪ್ರಕಾಶ್(ಕಂದಾಯ ಸಚಿವರು)

ಅ) ಇಲ್ಲ.

ಆ) ಮತ್ತು ಇ) ಉದ್ಭವಿಸುವುದಿಲ್ಲ.

740(345) ಶ್ರೀ ಹಾಲಪ್ಪ ಹೆಚ್.(ಹೊಸನಗರ) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ 2004-05 ನೇ ಸಾಲಿನಲ್ಲಿ ಸೆಂಟ್ರಲ್ ರೋಡ್ ಫಂಡ್ (CRF) ಯೋಜನೆಯಡಿಯಲ್ಲಿ ಪ್ರಸ್ತಾವನೆ ಸಲ್ಲಿಸಲಾದ ಕಾಮಗಾರಿಗಳೆಷ್ಟು ಹಾಗೂ ಮಂಜೂರಾದ ಕಾಮಗಾರಿಗಳೆಷ್ಟು?

ಶ್ರೀ ಎಂ.ಪಿ. ಪ್ರಕಾಶ್(ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ರಾಜ್ಯದಲ್ಲಿ 2004-05 ನೇ ಸಾಲಿನಲ್ಲಿ ಸೆಂಟ್ರಲ್ ರೋಡ್ ಫಂಡ್ (CRF) ಯೋಜನೆಯಡಿಯಲ್ಲಿ 326 ರಸ್ತೆ ಕಾಮಗಾರಿ ಪ್ರಸ್ತಾವನೆಗಳನ್ನು ಕೇಂದ್ರ ಸರ್ಕಾರಕ್ಕೆ ಜುಲೈ 2004 ರಲ್ಲಿ ಸಲ್ಲಿಸಲಾಗಿತ್ತು. ಅದರಲ್ಲಿ 73 ಕಾಮಗಾರಿಗಳು ರೂ. 54.50 ಕೋಟಿಗಳ ಮೊತ್ತಕ್ಕೆ ಕೇಂದ್ರ ಸರ್ಕಾರದಿಂದ ಅಕ್ಟೋಬರ್ 2004 ರಲ್ಲಿ ಮಂಜೂರಾಗಿರುತ್ತದೆ.

ನಂತರ 13ನೇ ಜನವರಿ 2005 ರಲ್ಲಿ 123 ಕಾಮಗಾರಿಗಳನ್ನು 51.00 ಕೋಟಿ ರೂ.ಗಳ ಅಂದಾಜು ಮೊತ್ತಕ್ಕೆ ಕೇಂದ್ರ ಸರ್ಕಾರಕ್ಕೆ ಅನುಮೋದನೆಗಾಗಿ ಸಲ್ಲಿಸಲಾಗಿದೆ.

741(348) ಶ್ರೀ ಹಾಲಪ್ಪ ಹೆಚ್.(ಹೊಸನಗರ) : ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ಯುವಜನ ಸೇವಾ ಹಾಗೂ ಕ್ರೀಡಾ ಸಚಿವರು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೆ?

ಅ) ಶಿವಮೊಗ್ಗ ಜಿಲ್ಲೆಯು ಯುವಜನ ಸೇವಾ ಇಲಾಖೆಯಲ್ಲಿ ಇದುವರೆವಿಗೆ ನೋಂದಾಯಿಸಲಾದ ಸಂಘಗಳೆಷ್ಟು; ಇದರಲ್ಲಿ ಸರ್ಕಾರದ ಸೌಲಭ್ಯ ನೀಡಿರುವುದೆಷ್ಟು?

**ಶ್ರೀ ಜಬ್ಬಾರ್ ಖಾನ್ ಹೊನ್ನಳ್ಳಿ (ಅಲ್ಪಸಂಖ್ಯಾತರ ಕಲ್ಯಾಣ ಮತ್ತು ಯುವಜನ ಸೇವಾ ಹಾಗೂ ಕ್ರೀಡಾ ಸಚಿವರು)**

ಅ) ಶಿವಮೊಗ್ಗ ಜಿಲ್ಲೆಯಲ್ಲಿ ಇದುವರೆಗೆ ನೊಂದಾಯಿಸಲಾದ ಯುವಕ:ಯುವತಿ ಸಂಘಗಳ ಒಟ್ಟು ಸಂಖ್ಯೆ 1429. ಇದರಲ್ಲಿ ಸರ್ಕಾರದ ಸೌಲಭ್ಯ ನೀಡಿರುವ ವಿವರಗಳು ಈ ಕೆಳಕಂಡಂತಿದೆ.

| | 2001–02 | | 2002–03 | | 2003–04 | |
|---|---|---|---|---|---|---|
| ಸಂಘಗಳ ಸಂಖ್ಯೆ ಹಾಗೂ ಉದ್ದೇಶ | ಅನುದಾನದ ಮೊತ್ತ | ಸಂಘಗಳ ಸಂಖ್ಯೆ | ಅನುದಾನದ ಮೊತ್ತ | ಸಂಘಗಳ ಸಂಖ್ಯೆ | ಅನುದಾನದ ಮೊತ್ತ |
| 2 ಸಂಘಗಳಿಗೆ ಆಟದ ಮೈದಾನದ ಅಭಿವೃದ್ಧಿಗಾಗಿ | 0.16 ಲಕ್ಷ | – | – | – | – |
| 2 ಸಂಘಗಳಿಗೆ ಕಟ್ಟಡ ನಿರ್ಮಾಣಕ್ಕಾಗಿ | 0.50 ಲಕ್ಷ | 1 ಸಂಘ | 0.25 | 1 ಸಂಘ | 0.20ಲಕ್ಷ |
| 12 ಸಂಘಗಳಿಗೆ ಪೀಠೋಪಕರಣ ಕ್ರೀಡಾ ಸಾಮಗ್ರಿ ಖರೀದಿಗಾಗಿ | 0.30 ಲಕ್ಷ | 23 ಸಂಘಗಳಿಗೆ | 0.635 ಲಕ್ಷ | 15 ಸಂಘ | 0.37 ಲಕ್ಷ |
| 3 ಸಂಘಗಳಿಗೆ ರಾಜ್ಯ ಮಟ್ಟದ ಸ್ಪರ್ಧೆ ನಡೆಸಲು, ಕಾರ್ಯಾಗಾರ/ಜಿಲ್ಲಾ ಮಟ್ಟದ ಯುವ ಮುಂದಾಳತ್ವ ತರಬೇತಿ ಶಿಬಿರ | 0.675 | – | – | 1 ಸಂಘಕ್ಕೆ | 0.025ಲಕ್ಷ |
| 3 ಸಂಘಗಳಿಗೆ ಕುಸ್ತಿ ಅಖಾಡಾ ಅಭಿವೃದ್ಧಿಗಾಗಿ | 0.32 ಲಕ್ಷ | 2 ಸಂಘಗಳಿಗೆ | 0.22 ಲಕ್ಷ | 1 ಸಂಘಕ್ಕೆ | 0.21ಲಕ್ಷ |
| 10 ಸಂಘಗಳಿಗೆ ಬಯಲು ರಂಗಮಂದಿರ ನಿರ್ಮಾಣಕ್ಕಾಗಿ | 1.40 ಲಕ್ಷ | 4 ಸಂಘಗಳಿಗೆ | 0.35 ಲಕ್ಷ | 1 ಸಂಘಕ್ಕೆ | 0.10 ಲಕ್ಷ |